ಜಾನಪದ ಕಲಾವಿದರಿಗೆ ಮಾಸಾಶನ.

639 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಜಾನಪದ ಅಕಾಡೆಮಿ ಇಲ್ಲಿಯವರೆಗೆ ಎಷ್ಟು ಜನ ಜಾನಪದ ಕಲಾವಿದರಿಗೆ ಮಾಸಾಶನ ನೀಡುತ್ತಿದೆ?

ಆ) ಹಾಲಿ ಮಾಸಾಶನ ನೀಡುತ್ತಿರುವ ಮೊಬಲಗೆಷ್ಟು?

ಇ) 70 ವರ್ಷವಾಗಿರತಕ್ಕ ಜಾನಪದ ಕಲಾವಿದರಿಗೆ ಮಾತ್ರ ಅಕಾಡೆಮಿ ಮಾಸಾಶನ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಈ ನಿಯಮವನ್ನು ಸಡಿಲಿಸಿ 50 ವರ್ಷ ದಾಟಿದ ಎಲ್ಲಾ ಅರ್ಹ ಜಾನಪದ ಕಲಾವಿದರಿಗೆ ಮಾಸಾಶನ ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆಯೇ?

ಶ್ರೀ ಎಂ.ಪಿ. ಪ್ರಕಾಶ್ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) :

ಅ) ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಶಿಫಾರಸ್ಸಿನಂತೆ ಸರ್ಕಾರ ಇದುವರೆಗೆ ಒಟ್ಟು 956 ಮುಂದಿ ಜಾನಪದ ಕಲಾವಿದರಿಗೆ ಮಾನಾಶನ ನೀಡುತ್ತಿದೆ.

ಆ) ಮಾಸಿಕ ತಲಾ 150.00 ರೂ.ಗಳು.

ಇ) ಬಂದಿದೆ.

ಈ) ಇಲ್ಲ.

ವಿಧಾನ ಸಭಾಕ್ಷೇತ್ರಗಳ ರಸ್ತೆ ರಿಪೇರಿಗಾಗಿ ಹಣ.

640 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ರಸ್ತೆ ದುರಸ್ತಿಗಾಗಿ ಲೋಕೋಪಯೋಗಿ ಇಲಾಖೆ 1995-96ರಲ್ಲಿ 20.00ಲಕ್ಷ ರೂ.ಬಿಡುಗಡೆ ಮಾಡಿರುವುದು ನಿಜವೇ,

ಆ) ಹಾಗಿದ್ದಲ್ಲಿ, ಬೆಂಗಳೂರು ನಗರ ವಿಧಾನ ಸಭಾ ಕ್ಷೇತ್ರಗಳಿಗೂ ಈ ಹಣವನ್ನು ಬಿಡುಗಡೆ ಮಾಡಲಾಗಿದೆಯೇ,

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಪ್ರತಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ರಸ್ತೆಗಳನ್ನು ಅಭಿವೃದ್ಧಿಪಡಿಸುವುದಕ್ಕೆ 30.00 ಲಕ್ಷ ರೂ.ಗಳ ಅಂದಾಜಿನ ಅಭಿವೃದ್ಧಿ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.

ಆ) ಬೆಂಗಳೂರು ನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಗಳು ಇದ್ದಲ್ಲಿ, ಮಾತ್ರ ಯೋಜನೆಯು ಅನ್ವಯವಾಗುತ್ತದೆ.

ಬೆಂಗಳೂರು ನಗರದಲ್ಲಿರುವ ನಕಲಿ ಪಡಿತರ ಚೀಟಿಗಳನ್ನು ಹೊಂದಿರುವವರ ಮೇಲೆ ಕ್ರಮ.

642 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಪಡಿತರ ಚೀಟಿಗಳ ಸಂಖ್ಯೆ ಎಷ್ಟು?

ಆ) ಇಲ್ಲಿಯವರೆಗೆ ಎಷ್ಟು ನಕಲಿ ಪಡಿತರ ಚೀಟಿ ಪತ್ತೆ ಮಾಡಲಾಗಿದೆ?

ಇ) ನ್ಯಾಯಬೆಲೆ ಅಂಗಡಿಗಳು ಈ ನಕಲಿ ಪಡಿತರ ಚೀಟಿಗಳನ್ನು ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ನಕಲಿ ಪಡಿತರ ಚೀಟಿಗಳನ್ನು ಹೊಂದಿರುವವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ,

ಉ) ನಕಲಿ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಲು ವಿಶೇಷ ವಳವನ್ನು ರಚಿಸಲಾಗಿದೆಯೇ,

ಊ) ಇಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಬೆಂಗಳೂರು ನಗರದಲ್ಲಿ ದಿನಾಂಕ 1.3.96ರಲ್ಲಿ ಇದ್ದಂತೆ ಒಟ್ಟು ಪಡಿತರ ಚೀಟಿಗಳು, 9,99,262. ದಿನಾಂಕ 1.4.05 ರಿಂದ 29.2.96 ರವರೆಗೆ ಒಟ್ಟು 5670 ಪಡಿತರ ಚೀಟಿಗಳನ್ನು ಪತ್ತೆ ಮಾಡಲಾಗಿದೆ.

ಆ) ಹೌದು.

ಇ) ನಕಲಿ ಪಡಿತರ ಚೀಟಿಗಳನ್ನು ಸೃಷ್ಟಿಸಿ ವಿತರಿಸಿದವರನ್ನು ಪತ್ತೆ ಮಾಡಲಾಗದಿದ್ದುದರಿಂದ ಯಾರ ಮೇಲು ಕ್ರಮ ತೆಗೆದುಕೊಳ್ಳಲಾಗಿಲ್ಲ. ಆದರೂ ಸಹ ಪತ್ತೆಹಚ್ಚಿಲಾದ ನಕಲಿ ಪಡಿತರ ಚೀಟಿಗಳನ್ನು ಸಂಬಂಧಿಸಿದ ನ್ಯಾಯಬೆಲೆ ಅಂಗಡಿಯ ನಿಯೋಜನಾ ಪುಸ್ತಕದಲ್ಲಿ ರದ್ದುಗೊಳಿಸಿ ಸಕ್ಕರೆ ಸೀಮೆಎಣ್ಣೆ ಮತ್ತು ಆಹಾರ ಧ್ಯಾನ್ಯಗಳ ಹಂಚಿಕೆಯನ್ನು ಕಡಿಮೆಗೊಳಿಸಲಾಗಿದೆ.

ಈ) ಇಲ್ಲ.